ಹಿಡಿದು ಸೋದರಮಾವನ ಮನೆಗೆ ಬಂದ. ಎಲ್ಲೇ ಇರಲಿ, ಅವಳು ಹಿರಿಮಗಳು, ಅವಳಿಗೆ ಮದುವೆ ಮಾಡದೆ ಉಳಿದವರಿಗೆ ಮದುವೆ ಮಾಡಲು ಹೊರಟರೆ ನೆಂಟರಿಷ್ಟರ ಬಾಯಿಂದ ಕುಟುಕು ಮಾತು ಕೇಳಬೇಕಾಗಬಹುದೆಂಬುದು ಅಂತಃಪ್ರಜ್ಞೆಯಲ್ಲಿ ಕೆಲಸ ಮಾಡಿರಬಹುದು, ಅಥವಾ ಸೋದರಮಾವನೇ ಈ ಕುರಿತು ಒತ್ತಡ ಹಾಕಿದ್ದರೂ ಇರಬಹುದು. ಅವನಿಗೂ ಆತಂಕ ಇದ್ದೇ ಇರುತ್ತದೆಯಲ್ಲ? ತಂಗಿಯ ಮಗಳ ಮದುವೆಗೆ ಕಾಸು ಬಿಚ್ಚಲು ಅವನ್ಯಾಕೆ ತಯಾರಾಗುತ್ತಾನೆ? ತಯಾರಾದರೂ ಬಿಡುತ್ತಾಳೆಯೇ ಅತ್ತೆ? ಅವಳಿಗೂ ಒಬ್ಬ ಮಗಳಿಲ್ಲವೇ? ಎಂತೆಂತಾ ಅಪರಾಧ ಮಾಡಿ ಜೀವಾವಧಿ ಶಿಕ್ಷೆಗೊಳಗಾದವರಿಗೂ ಬಿಡುಗಡೆಯ ಭಾಗ್ಯ ಇರುತ್ತದೆಯಂತೆ, ಅದೆಷ್ಟೋ ವರ್ಷಗಳ ಕಾರಾಗೃಹವಾಸದ ನಂತರ. ನಳಿನಿಗೂ ಹಾಗೇ ಆಯ್ತು. 'ದೆಸೆ ತಿರುಗಿತು' ಅನ್ನುತ್ತಾರಲ್ಲ ಹಾಗೆ. ನಂಬಲಾಗುತ್ತಿಲ್ಲ ನಳಿನಿಗೆ. ಆದರೆ ಅವಳು ಕನಸಲ್ಲೂ ಕಲ್ಪಿಸದಿದ್ದ ಬದುಕನ್ನು ವಿಧಿ ಅವಳಿಗೆ ಕೊಡುಗೈಯಿಂದ ಉಡುಗೊರೆ ಕೊಟ್ಟಿತ್ತು. ಎರಡೂ ಕೈಯೆತ್ತಿ ಆಶೀರ್ವಾದ ಮಾಡಿತ್ತು.

★★★

